ವಿಜಯವಾಣಿ
ಕನ್ನಡಿಗರ ಧ್ವನಿ

# ಅಂತರ ವಿವಿ ಕ್ರಿಕೆಟ್ ಚಾಂಪಿಯನ್ ಜೈನ್ ತಂಡಕ್ಕೆ ಸನ್ಮಾನ

**ಬೆಂಗಳೂರು:** ಈ ತಿಂಗಳ ಆರಂಭದಲ್ಲಿ ನಡೆದ ಟೊಯೋಟಾ ಅಂತರ್ ವಿಶ್ವವಿದ್ಯಾಲಯ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ ಜೈನ್ ವಿಶ್ವವಿದ್ಯಾಲಯ ತಂಡವನ್ನು ಬುಧವಾರ ಸನ್ಮಾನಿಸಲಾ ಯಿತು.

ನಗರದ ಜೈನ್ ವಿವಿ ಕಾಮರ್ಸ್ ಹಾಗೂ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜಿನಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ತಂಡದ ಎಲ್ಲಾ ಸದಸ್ಯರಿಗೆ ಉಡುಗೊರೆ ನೀಡಲಾಯಿತಲ್ಲದೆ, ವಿಜೇತ ತಂಡಕ್ಕೆ ವಿಶ್ವವಿದ್ಯಾಲಯ ವತಿಯಿಂದ 12 ಲಕ್ಷ ರೂ. ಬಹುಮಾನ ಘೋಷಿಸಲಾಯಿತು. ಫೈನಲ್‌ನಲ್ಲಿ ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ತಂಡವನ್ನು ರೋಚಕ ಎರಡು ರನ್‌ಗಳಿಂದ ಸೋಲಿಸಿದ ಜೈನ್ ವಿವಿ ಚೊಚ್ಚಲ ಅಂತರ ವಿವಿ ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಎನಿಸಿಕೊಂಡಿತ್ತು.

ಆಟಗಾರರನ್ನು ಸನ್ಮಾನಿಸಿ ಮಾತನಾಡಿದ ಜೈನ್ ವಿವಿ ಟ್ರಸ್ಟ್ ಅಧ್ಯಕ್ಷ ಚೆನರಾಜ್ ರಾಯ್‌ಚಂದ್, ನಮ್ಮ ಕ್ರಿಕೆಟ್ ತಂಡ ನೀಡಿದ ಪ್ರದರ್ಶನ ನನ್ನ ಜೀವನದಲ್ಲಿ ನೋಡಿದ ಶ್ರೇಷ್ಠ ಆಟ. ತಂಡದ ಎಲ್ಲಾ ಆಟಗಾರರು ಉತ್ತಮ ಪ್ರದರ್ಶನ ತೋರಿದರು. ಈ ಆಟಗಾರರು ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸುವಂತಾಗಬೇಕು' ಎಂದು ಹೇಳಿದರು. ತಂಡದ ಎಲ್ಲಾ ಆಟಗಾರರು ಉತ್ತಮ ಪ್ರದರ್ಶನ ನೀಡಿದರು.



ವೈಯಕ್ತಿಕವಾಗಿ ಹೇಳುವುದಾದರೆ, ನಾಯಕ ಕೌನೇನ್ ಅಬ್ಬಾಸ್, ಶ್ರೇಯಸ್ ಗೋಪಾಲ್, ಸುಚಿತ್, ಜಗದೀಶ್ ಶ್ರೇಷ್ಠ ಪ್ರದರ್ಶನ ತೋರಿದರು ಎಂದು ಅವರು ಶ್ಲಾಘಿಸಿದರು.

'ತಂಡ ಚಾಂಪಿಯನ್ ಎನಿಸಿಕೊಳ್ಳುವಲ್ಲಿ ಎಲ್ಲರ ಶ್ರಮವಿತ್ತು. ಎಲ್ಲರ ಬೆಂಬಲವಿದ್ದರಿಂದಲೇ ತಂಡ ಶ್ರೇಷ್ಠ ಪ್ರದರ್ಶನ ತೋರಿತು' ಎಂದು ಜೈನ್ ವಿವಿ ಕ್ರೀಡಾ ನಿರ್ದೇಶಕ ಶಂಕರ್ ಯುವಿ ತಿಳಿಸಿದರು.

ಇದೇ ವೇಳೆ ಆಟಗಾರರಾದ ಲಿಯಾನ್ ಖಾನ್, ಶ್ರೇಯಸ್ ಗೋಪಾಲ್ ಹಾಗೂ ಸಮರ್ಥ್ ರವಿಕುಮಾರ್ ಟೂರ್ನಿಯ ತಮ್ಮ ಅನುಭವಗಳನ್ನು ಹಂಚಿಕೊಂಡರು.

## ಅಬ್ಬಾಸ್ ಅನುಪಸ್ಥಿತಿ

ಜೈನ್ ವಿವಿ ಚಾಂಪಿಯನ್ ಆಗಲು ಪ್ರಮುಖ ಕಾರಣರಾಗಿದ್ದ ಸರಣಿಶ್ರೇಷ್ಠ ಕೌನೇನ್ ಅಬ್ಬಾಸ್ ದಕ್ಷಿಣ ವಲಯ ಸಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕಾರಣ ಸಮಾರಂಭದಲ್ಲಿ ಹಾಜರಿರಲಿಲ್ಲ.

## ಸಿಂಗಾಪುರ ಟೂರ್

ಚಾಂಪಿಯನ್ ಆದ ತಂಡವನ್ನು ಜೈನ್ ವಿವಿ ಐದು ದಿನಗಳ ಕಾಲ ಸಿಂಗಾಪುರ, ಮಲೇಷ್ಯಾ ಪ್ರವಾಸಕ್ಕೆ ಕಳಿಸುತ್ತಿದೆ. ತಂಡದ ಆಟಗಾರರು ಹಾಗೂ ಸಿಬ್ಬಂದಿ ವರ್ಗ ಮಾರ್ಚ್ 21ರಿಂದ ಐದು ದಿನಗಳ ಕಾಲ ವಿದೇಶ ಪ್ರವಾಸಕ್ಕೆ ತೆರಳಲಿದ್ದು, ಇದರ ಸಂಪೂರ್ಣ ವೆಚ್ಚವನ್ನು ಕಾಲೇಜು ಭರಿಸಲಿದೆ.